**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಹೊಳಲ್ಕೆರೆ.**

**ಸಿ.ಸಿ.1551/2021**

| | | | |
|---|---|---|---|
| ಸಾಕ್ಷಿಯ ಹೆಸರು | : | ತಿಪ್ಪೇಸ್ವಾಮಿ | ಪ್ರಾ ಸಾಃ 1 |
| ತಂದೆಯ ಹೆಸರು | : | ನಾಗಪ್ಪ | ಚಾಸಾಃ 1 |
| ವಯಸ್ಸು | : | 38 ವರ್ಷ | |
| ಕೆಲಸ | : | ವ್ಯವಸಾಯ | ಸಾ ಪ್ರ ಬೋ |
| ವಾಸ | : | ಗುಂಡಿಮಡು ಗೊಲ್ಲರಹಟ್ಟಿ ಗ್ರಾಮ | ದಿಃ 27.02.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ಚಾಸಾ-2 ಮತ್ತು 3 ರವರು ಗೊತ್ತು. ಮೃತ ಶಿವಪ್ಪ ಬಿನ್ ಸಣ್ಣೀರಪ್ಪ ರವರು ಗೊತ್ತು. ದಿನಾಂಕ 15.05.2021 ರಂದು ಶಿವಪ್ಪ ಬಿನ್ ಸಣ್ಣೀರಪ್ಪ ರವರ ಮೇಲೆ ಬೆಳಿಗ್ಗೆ 08.00 ಗಂಟೆ ಸಮಯದಲ್ಲಿ ಲಾರಿ ಹಾದುಹೋಗಿತ್ತು. ಸದರಿ ಅಪಘಾತ ಗುಂಡಿಮಡು ಕ್ರಾಸಿನ ಸಮೀಪ ಆಗಿತ್ತು. ಶಿವಪ್ಪರವರು ರಸ್ತೆಯ ಬಳಿ ಕುಳಿತ್ತಿದ್ದಾಗ, ಚಿತ್ರದುರ್ಗದ ಕಡೆಯಿಂದ ಬಂದ ಲಾರಿ ಶಿವಪ್ಪರವರ ಮೇಲೆ ಹತ್ತಿಸಿಕೊಂಡು ಹೋಗಿತ್ತು. ಸದರಿ ಲಾರಿಯ ಚಾಲಕ ಲಾರಿಯನ್ನು ವೇಗವಾಗಿ ಚಾಲನೆ ಮಾಡಿಕೊಂಡು ಬರುತ್ತಿದ್ದನು. ಶಿವಪ್ಪರವರ ತಲೆಯ ಮೇಲೆ ಲಾರಿಯ ಟೈರು ಹಾದುಹೋಗಿದ್ದು, ಶಿವಪ್ಪರವರು ಸ್ಥಳದಲ್ಲಿಯೇ ಮೃತಪಟ್ಟರು. ನಾನು ಅದೇ ರಸ್ತೆಯಲ್ಲಿ ಸ್ವಲ್ಪ ದೂರದಲ್ಲಿ ಇದ್ದೇನು. ನಾನು ಬರುವಷ್ಟರಲ್ಲಿ ಲಾರಿ ಶಿವಪ್ಪನ ಮೇಲೆ ಹಾದುಹೋಗಿತ್ತು. ಸದರಿ ಲಾರಿಯ ಸಂ.ಕೆಎ-25-ಎಎ-3498. ನಾನು ಈ ಕುರಿತು ಹೊಳಲ್ಕೆರೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿ ದೂರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಅಪಘಾತ ಲಾರಿಯ ಚಾಲಕನ ತಪ್ಪಿನಿಂದ ಆಗಿರುತ್ತದೆ. ನಾನು ಲಾರಿಯ ಚಾಲಕನನ್ನು ನೋಡಿಲ್ಲ. ನಾನು ಲಾರಿಯ ಚಾಲಕನನ್ನು ನೋಡಿಲ್ಲದ ಕಾರಣ ಆತನನ್ನು ಈಗ ನೋಡಿದರೆ ಗುರುತಿಸಲು ಆಗುವುದಿಲ್ಲ. ದೂರು ನೀಡಿದ ನಂತರ ಸುಮಾರು 10.00 ಗಂಟೆಗೆ ಪೊಲೀಸರು ಸ್ಥಳಕ್ಕೆ ಬಂದು ಮಹಜರನ್ನು ಮಾಡಿರುತ್ತಾರೆ. ಸಾಕ್ಷಿ ಮಹಜರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಅಪಘಾತದ ದಿನದಂದೇ ಬೆಳಿಗ್ಗೆ 10.00 ಗಂಟೆಗೆ ಮಹಜರನ್ನು ಮಾಡಿರುತ್ತಾರೆ. ಸದರಿ ಮಹಜರಿನ ಸಮಯದಲ್ಲಿ ಪೊಲೀಸರು ನಕ್ಷೆಯನ್ನು ತಯಾರಿಸಿರುತ್ತಾರೆ. ಮಹಜರಿನ ಕಾಲಕ್ಕೆ

ತೆಗೆದ ಛಾಯಾಚಿತ್ರಗಳಲ್ಲಿ ಸಾಕ್ಷಿ ಸ್ಥಳವನ್ನು ಮತ್ತು ತನ್ನನ್ನು ನೋಡಿ ಗುರುತಿಸಿರುತ್ತಾರೆ. ಛಾಯಾಚಿತ್ರಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಅಪಘಾತದ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಮಹಜರಿನ ಸಮಯದಲ್ಲಿ ನನ್ನೊಂದಿಗೆ ಚಾಸಾ-2 ಮತ್ತು 3 ರವರು ಇದ್ದರು. ಚಾಸಾ-2 ಮತ್ತು ಚಾಸಾ-3 ರವರು ಸಹ ಮಹಜರಿಗೆ ಸಹಿ ಮಾಡಿರುತ್ತಾರೆ. ಸಾಕ್ಷಿ ಅಪಘಾತ ಪಡಿಸಿದ ಲಾರಿಯನ್ನು ಛಾಯಾಚಿತ್ರಗಳಲ್ಲಿ ನೋಡಿ ಗುರುತಿಸಿದ್ದು, ನಿಪಿ-5 ರಿಂದ ನಿಪಿ-10 ಎಂದು ಗುರುತಿಸಲಾಯಿತು. ಛಾಯಾಚಿತ್ರಗಳಿಗೆ ಸಂಬಂಧಿಸಿದ ಸಿಡಿಯನ್ನು ನಿಪಿ-11 ಎಂದು ಗುರುತಿಸಲಾಯಿತು. ಈ ವಿಚಾರದ ಕುರಿತು ಪೊಲೀಸರು ನನ್ನ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಮಾನ್ಯ ಎ.ಪಿ.ಪಿ.ಯವರಿಂದಃ**

2. ಲಾರಿಯ ಚಾಲಕನವಾದ ಮಹಾಂತೇಶ್ ರವರು ಲಾರಿಯನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲಕನೆ ಮಾಡಿಕೊಂಡು ಬಂದು ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿ. ನಾನು ಅಪಘಾತಪಡಿಸಿದ ವ್ಯಕ್ತಿಯನ್ನು ಸ್ಥಳದಲ್ಲಿ ಮತ್ತು ಠಾಣೆಯಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಪಘಾತಪಡಿಸಿದ ವ್ಯಕ್ತಿಯನ್ನು ನೋಡಿದ್ದರೂ ಸಹ ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್.ವಿ ವಕೀಲರಿಂದ.**

3. ದೂರಿಗೆ ಪೊಲೀಸರಿಗೆ ಸಹಿ ಮಾಡು ಎಂದು ಹೇಳಿದ ಮೇರೆಗೆ ಮಾಡಿರುತ್ತೇನೆ. ದೂರಿನಲ್ಲಿ ಬರೆದಿರುವ ವಿಚಾರಗಳ ಕುರಿತು ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.